<u>ದಿನಾಂಕಃ **29.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಕೆ ವಿ ವಕೀಲರಿಂದಃ</u>

ನಾನು ಘಟನಾ ಸ್ಥಳಕ್ಕೆ ಹೋದ ಕಾಲಕ್ಕೆ ನವೀನ್ ಕರುವಾನೆ, ರಕ್ಷಿತ್, ಅತ್ರವಳ್ಳಿ ನಾಗೇಶ್ ಇವರು ಸ್ಥಳದಲ್ಲಿ ಇದ್ದರಾ ಎಂದರೆ ಸಾಕ್ಷಿ ನಾವು ಹೋದಾಗ ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದ ಅರ್ಧ ಗಂಟೆಯ ನಂತರ ಅವರು ಬಂದಿರುತ್ತಾರೆ. ನಾವು ಆ ದಿನ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯ ವರೆಗೆ ಸದರಿ ಸ್ಥಳದಲ್ಲಿ ಹಾಜರಿದ್ದೆವು. ನನಗೆ ಈ ಅರ್ಜಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ಈ ಅರ್ಜಿಗೆ ನಮ್ಮ ವಕೀಲರ ಮುಖಾಂತರ ಪ್ರತ್ಯೇಕವಾಗಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಪ್ರತ್ಯೇಕ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಅರ್ಜಿಗೆ ಸಲ್ಲಿಸಿದ ತಕರಾರಿನ ಅಂಶಗಳು ಮತ್ತು ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಒಂದೇ ರೀತಿ ಇರುತ್ತದೆ. ಅರ್ಜಿದಾರರು ಈ ಅರ್ಜಿಯಲ್ಲಿ ಹೇಳಿರುವ ವಿಚಾರಗಳು ನಾನು ಓದಿ ತಿಳಿದುಕೊಂಡಿರುತ್ತೇನೆ.

2. ನನ್ನ ಮುಖ್ಯ ವಿಚಾರಣೆಯಲ್ಲಿನ ವಿಚಾರಗಳನ್ನು ಬರೆಯಲು ನಮ್ಮ ವಕೀಲರಾದ ಸುಧೀರ್ ಕುಮಾರ್ ಮುರೋಳ್ಳಿ ಇವರಿಗೆ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳನ್ನು ಓದಿ ನಾನು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ನಮ್ಮ ಮೇಲಾಧಿಕಾರಿಗೆ ಮೌಖಿಕವಾಗಿ ತಿಳಿಸಿದ್ದು ಆದರೆ ಯಾವುದೇ ಲಿಖಿತ ಆದೇಶ ಇರುವುದಿಲ್ಲ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನುಸಲ್ಲಿಸುವ ಕಾಲಕ್ಕೆ ಆ ದಿನ ನಾನು ನಮ್ಮ ಇಲಾಖಾ ಸಮವಸ್ತ್ರ ಧರಿಸಿದ್ದೆ ಎಂದರೆ ಸರಿ. ನಾನು ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿ ಕೊಡಲು ಬಂದ ಸಂಬಂಧ ಹಾಜರಾತಿಯನ್ನು ಸದರಿ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ಆ ದಿನ ನ್ಯಾಯಾಲಯಕ್ಕೆಹಾಜರಾಗಿದ್ದು ಆ ದಿನ ವೇತನವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಸಾರ್ವಜನಿಕ ಸೇವೆ

ಮಾಡುವ ಸಂದರ್ಭದಲ್ಲಿ ನನ್ನ ವಿರುದ್ಧ ಈ ಅರ್ಜಿ ಸಲ್ಲಿಸಿದ್ದು ನಾನು ಸಾರ್ವಾಜನಿಕ ಸೇವೆಯಲ್ಲಿ ಹಾಜರಾಗಿರುತ್ತೇನೆ ಎಂದು ಉತ್ತರಿಸುತ್ತಾರೆ.

3. ನಾನು ಈ ಅರ್ಜಿಯಲ್ಲಿ ಸರ್ಕಾರಿ ವಕೀಲರನ್ನು ನನ್ನ ಪರವಾಗಿ ಹಾಜರಾಗಲು ನೇಮಕ ಮಾಡಿಕೊಂಡಿಲ್ಲ ಎಂದರೆ ಸರಿ. ನಾನು ನಮ್ಮ ಮೇಲಾಧಿಕಾರಿಗಳಿಗೆ ನನ್ನ ವಿರುದ್ಧ ಖಾಸಗಿ ದೂರು ದಾಖಲಾದ ಬಗ್ಗೆ ಲಿಖಿತವಾಗಿ ಯಾವುದೇ ಮನವಿ ಕೊಟ್ಟಿಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಜೊತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮೂಲ ದಾವೆಯಲ್ಲಿ ಸತೀಶ್ ಮತ್ತು ಅವರ ಹೆಂಡತಿ ಭವಾನಿ ಅವರಿಗೆ ಅನುಸೂಚಿತ ಆಸ್ತಿಗಳಿಗೆ ಹೋಗಲು ರಕ್ಷಣೆ ಕೊಡುವಂತೆ ಆದೇಶ ಆಗಿತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ರಸ್ತೆಯಲ್ಲಿ ಮಣ್ಣು ಕಲ್ಲು ಇದ್ದರೆ ತೆಗೆಯುವಂತೆ ಆದೇಶ ಆಗಿತ್ತು ಎಂದು ಉತ್ತರಿಸುತ್ತಾರೆ. ನಾನು ಆ ದಿನ ಸ್ಥಳಕ್ಕೆ ಹೋದಾಗ ಸದರಿ ರಸ್ತೆಯಲ್ಲಿ ಮಣ್ಣು ಕಲ್ಲು ಇರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವ ಕಾಲಕ್ಕೆ ನನ್ನ ಜೊತೆ ಯಾವ ಕಂದಾಯ ಅಧಿಕಾರಿಗಳು ಇರಲಿಲ್ಲ. ಕಂದಾಯ ಅಧಿಕಾರಿಗಳು ನಮ್ಮ ಜೊತೆ ಇರದೇ ಇದ್ದ ಕಾರಣ ನಿರ್ಧಿಷ್ಟವಾಗಿ ಯಾವ ಸ್ವತ್ತು ಮತ್ತು ರಸ್ತೆ ಎಂಬುದರ ಬಗ್ಗೆ ನನಗೆ ಸ್ಪಷ್ಟವಾಗಿ ಗೊತ್ತಿರಲಿಲ್ಲ ಎಂದರೆ ಸರಿ. ನನಗೆ ಮೂಲದಾವೆಯಲ್ಲಿ ಪ್ರತಿವಾದಿಗಳಾದ ಜಯಮ್ಮ ಹಾಗೂ ಶ್ರೀನಿವಾಸ ಇವರ ಪರಿಚಯ ಇರುವುದಿಲ್ಲ ಆದರೆ ಮುಖ ಪರಿಚಯ ಇರುತ್ತದೆ.

4. ನನಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕ ಮತ್ತು ಈಗಲೂ ಸಹ ಸರ್ವೆ ನಂಬರ್ 137 ಮತ್ತು 223 ರಲ್ಲಿ ಯಾರು ಯಾರು ಸ್ವಾಧೀನ ಇದ್ದಾರೆ ಮತ್ತು ಎಷ್ಟು ವಿಸ್ತೀರ್ಣ ಇರುತ್ತದೆ ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಆ ದಿನ ಮುಖ್ಯ ರಸ್ತೆಯಿಂದ ಜಯಮ್ಮ ಇವರ ಮನೆಯ ತನಕ ಹೋಗಿರುತ್ತೇನೆ. ಜಯಮ್ಮನವರ ಮನೆಯ ಪಕ್ಕದಲ್ಲಿ ರಸ್ತೆ ಮತ್ತು ಅದರ ಪಕ್ಕದಲ್ಲಿ ಬೇಲಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ. ನಿಪಿ- 6 ರಲ್ಲಿ ಗೇಟ್ ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಜಯಮ್ಮನವರ ಮನೆಯ ಗೇಟು ಇರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ- 6 ರಲ್ಲಿ ಗೇಟ್ ಇದ್ದು ಗೇಟಿನ ಮುಂಭಾಗ ಬೈಕ್ ಅಡ್ಡಲಾಗಿ ನಿಲ್ಲಿಸಲಾಗಿರುತ್ತದೆ ಎಂದರೆ ಸರಿ. ಗೇಟಿನ ನಂತರ ರಸ್ತೆಯ ಚಿತ್ರಣ ಕಂಡು ಬರುತ್ತದೆ ಎಂದರೆ ಸಾಕ್ಷಿ ಅದು ರಸ್ತೆಯೋ ಅಥವಾ ಜಮೀನೋ ಎಂದು ಗೊತ್ತಾಗುತ್ತಿಲ್ಲ ಎಂದು

ಉತ್ತರಿಸುತ್ತಾರೆ. ಸದರಿ ಗೇಟಿನ ಹಿಂದಗಡೆ ಇರುವ ಜಮೀನು ಶ್ರೀನಿವಾಸ ಪ್ರಭಾ ಇವರು ತಮ್ಮ ಸ್ವಾಧೀನದಲ್ಲಿನ ಜಮೀನು ಎಂದು ಹೇಳಿರುತ್ತಾರೆ. ನಿಪಿ- 6 ರಲ್ಲಿ ಗೇಟಿನ ಹಿಂಭಾದಲ್ಲಿ ರಸ್ತೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ ಎಂದರೆ ಸಾಕ್ಷಿ ನನಗೆ ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 7 ರಲ್ಲಿ ನಮ್ಮ ಸಿಬ್ಬಂದಿಯವರು ಕಾಣುತ್ತಾರೆ ಎಂದರೆ ಸರಿ. ನಮ್ಮ ಸಿಬ್ಬಂದಿಯವರು ನನ್ನ ಆದೇಶದ ಮೇರೆಗೆ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಆದೇಶದ ಮೇರೆಗೆ ನಮ್ಮ ಸಿಬ್ಬಂದಿಯವರು ಸತೀಶ್ ಇವರಿಗೆ ಮುಂದೆ ಹೋಗದಂತೆ ತಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-6 ರಲ್ಲಿ ರಕ್ಷಿತ್ ಇವರು ಗೇಟ್ ಗೆ ಅಡ್ಡಲಾಗಿ ನಿಂತಿದ್ದು ಅವರುನ್ನು ನೀವು ಏಕೆ ಅಡ್ಡಲಾಗಿ ನಿಂತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅದು ಯಾವಾಗ ತೆಗೆದಿರುತ್ತಾರೆ ಎಂದು ನನ ಗೆಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಆ ದಿನ ಜಯಮ್ಮನವರು ಮನೆಯ ಮುಂದಿನ ಗೇಟಿನ ತನಕ ಹೋಗಿರುತ್ತೇನೆ. ಸದರಿ ಗೇಟು ರಸ್ತೆಗೆ ಅಡ್ಡಲಾಗಿ ಇತ್ತು ಎಂದರೆ ಸಾಕ್ಷಿ ಅವರ ಮನೆಯ ಮುಂದೆ ಇತ್ತು ಎಂದು ಉತ್ತರಿಸುತ್ತಾರೆ. ಸದರಿ ರಸ್ತೆ ಆ ಗೇಟಿಗೆ ಮುಕ್ತಾಯವಾಗಿತ್ತು ಎಂದರೆ ಸರಿ. ನಾನು ಗೇಟಿನಿಂದ ಮುಂದೆ ರಸ್ತೆ ಇರುವ ಬಗ್ಗೆ ವಿಚಾರ ಮಾಡಿರುವುದಿಲ್ಲ ಸಾಕ್ಷಿ ಅಲ್ಲಿ ರಸ್ತೆ ಇರಲಿಲ್ಲ ಎಂದು ಉತ್ತರಿಸುತ್ತಾರೆ.

5. ಜಯಮ್ಮ ನವರ ಮನೆಯ ಪಕ್ಕ ಮಂಜುನಾಥ ಗೌಡ ಇವರ ವಾಸದ ಮನೆ ಇದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಜಯಮ್ಮನ ಮನೆಯ ಪಕ್ಕ ಯಾರ ಮನೆ ಬರುತ್ತದೆ ಎಂಬುದರ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಜಯಮ್ಮನವರ ಮನೆಯಿಂದ ಅನುಸೂಚಿತ ಸ್ವತ್ತು ಎಷ್ಟು ದೂರದಲ್ಲಿ ಇತ್ತು ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ಸತೀಶ ಮತ್ತು ಭವಾನಿಯವರನ್ನು ತಮ್ಮ ಸ್ವತ್ತುಗಳು ಎಲ್ಲಿ ಬರುತ್ತದೆ ಎಂಬ ಬಗ್ಗೆ ಕೇಳಿರುವುದಿಲ್ಲ. ನಾನು ಅರ್ಜಿದಾರರಿಗೆ ತಮ್ಮ ಜಮೀನುಗಳಿಗೆ ಎಲ್ಲಿಯವರೆಗೆ ರಕ್ಷಣೆ ಕೊಡಬೇಕು ಎಂಬುದರ ಬಗ್ಗೆ ಕೇಳಿರುವುದಿಲ್ಲ ಸಾಕ್ಷಿ ಮುಂದುವರೆದು ಸತೀಶ್ ಮತ್ತು ಭವಾನಿಯವರು ಹೇಳುವ ಜಾಗ ಶ್ರೀನಿವಾಸ ತಮ್ಮ ಸ್ವಾ ಧೀನದ ಜಾಗ ಎಂದು ಹೇಳಿದ ಕಾರಣ ನಾನು ಸರ್ವೆಯವರ ಸಹಾಯ ಬೇಕೆಂದು ನ್ಯಾಯಾಲಯಕ್ಕೆ ಮಹಜರು ಮೂಲಕ ಸಲ್ಲಿಸಿರುತ್ತೇನೆ. ಸತೀಶ್ ಇವರು ಗೇಟ್ ನಿಂದ ತಮ್ಮ ಜಾಗವನ್ನು ನನಗೆ

ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸತೀಶ್ ಮತತು ಭವಾನಿ ಇವರಿಗೆ ತಮ್ಮ ಜಾಗ ಎಲ್ಲಿಯವರೆಗೆ ರಕ್ಷಣೆ ಕೊಡಬೇಕು ಎಂದು ಕೇಳಿರುವುದಿಲ್ಲ ಎಂದರೆ ಸರಿ.

6. ರಸ್ತೆಗೆ ಇದ್ದ ಗೇಟನ್ನು ತೆಗೆದು ಅಥವಾ ತೆರವು ಮಾಡಿ ಮುಂದೆ ಹೋಗಲು ನಾನು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಗೇಟ್ ನಿಂದ ಸತೀಶ್ ತೋರಿಸಿದ ಜಾಗದವರೆಗೆ ಅವರಿಗೆ ರಕ್ಷಣೆ ನೀಡಿ ಕರೆದುಕೊಂಡು ಹೋಗುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಗೇಟಿನ ನಂತರ ಶ್ರೀನಿವಾಸ ಇವರ ಖಾಸಗಿ ಜಾಗ ಎಂದು ಹೇಳಿದ ಕಾರಣ ಹೋಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಶ್ರೀನಿವಾಸ ಇವರ ಖಾಸಗಿ ಜಾಗ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಪರಿಶೀಲನೆ ಮಾಡಿರುವುದಿಲ್ಲ. ಈ ಘಟನೆಯ ಸಂಬಂಧ ನಾನು ಇದಕ್ಕಿಂತ ಪೂರ್ದಲ್ಲಿ ಆಗಲೀ ಅಥವಾ ನಂತರದಲ್ಲಿ ಆಗಲೀ ಘಟನಾ ಸ್ಥಳಕ್ಕೆ ಹೋಗಿದ್ದೀರ ಎಂದರೆ ಸಾಕ್ಷಿ ನೆನಪಿರುವುದಿಲ್ಲ ಎಂದು ಉತ್ತರಿಸಿದ್ದು ಪುನಃ ತಹಶೀಲ್ದಾರರ ಆದೇಶದ ಮೇರೆಗೆ ಭದ್ರತೆಗೆ ಹೋಗಿದ್ದೆವು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನನಗೆ ಸತೀಶ್ ಇವರ ಜಾಗ ಗೊತ್ತಿರಲಿಲ್ಲ. ಸಾಕ್ಷಿ ಮುಂದುವೆರದು ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂಬ ಸಲುವಾಗಿ ಪೊಲೀಸ್ ರಕ್ಷಣೆಗೆ ಹೋಗಿದ್ದೆವು ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದಿಂದ ರಕ್ಷಣೆ ನೀಡುವಂತೆ ಆದೇಶಕ್ಕಿಂತ ಪೂರ್ವದಲ್ಲಿ ನಾವು ತಹಶೀಲ್ದಾರರವರಿಗೆ ರಕ್ಷಣೆಯ ಸಂಬಂಧ ಅಲ್ಲಿಗೆ ಹೋಗಿದ್ದೆವು. ತಹಶೀಲ್ದಾರರವರು ಸತೀಶ್ ಮತ್ತು ಭವಾನಿ ಇವರ ಜಮೀನುಗವರೆಗೆ ಹೋಗಿ ಪರಶೀಲನೆ ಮಾಡಿ ಬಂದಿರುತ್ತಾರೆ ಎಂದರೆ ನನಗೆ ನೆನಪಿರುವುದಿಲ್ಲ.

7. ಸತೀಶ್ ಇವರ ಆಸ್ತಿಗೆ ಸಂಬಂಧಿಸಿದಂತೆ ರಕ್ಷಣೆ ನೀಡುವಂತೆ ಡಿ.ವೈ.ಎಸ್.ಪಿ ಇವರಿಗೆ ನ್ಯಾಯಾಲಯದಿಂದ ಆದೇಶ ಆಗಿತ್ತು ಎಂದರೆ ಸಾಕ್ಷಿ ನಾನು ಆವಾಗ ವರ್ಗಾವಣೆಯಾಗಿದ್ದೆ ಎಂದು ಉತ್ತರಿಸುತ್ತಾರೆ. ಸದರಿ ರಸ್ತೆ ಜಯಮ್ಮನವರ ಮನೆಯ ವರೆಗೆ ಅದೇ ರೀತಿ ಇತ್ತು ಮತ್ತು ಮುಂದೆ ಯಾವುದೇ ರಸ್ತೆ ಬದಲಾವಣೆ ಮಾಡಿದ ಬಗ್ಗೆ ಕಂಡು ಬಂದಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ರಸ್ತೆಗೆ ಅಡ್ಡಲಾಗಿ ಸೋಲಾರ್ ಬೇಲಿ ತಂತಿಯನ್ನು ಅಳವಡಿಸಿರುತ್ತಾರೆ. ಸದರಿ ಸೋಲಾರ್ ಬೇಲಿ ವಿದ್ಯುತ್ ಸಂಪರ್ಕಕ್ಕೆ ಸಿದ್ಧವಾಗಿತ್ತು ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ. ಸದರಿ ಸೋಲಾರ್ ಬೇಲಿಯನ್ನು ಏಕೆ ಅಡ್ಡಲಾಗಿ ಕಟ್ಟಿರುತ್ತೀರಿ ಎಂಬ ಬಗ್ಗೆ ಶ್ರಿನಿವಾಸ ಇವರನ್ನು

ಕೇಳಿದ್ದು ಅವರು ನಮ್ಮ ಜಾಗ ಹಾಕಿರುತ್ತೇವೆ ಎಂದು ಹೇಳಿರುತ್ತಾರೆ. ಆ ದಿನ ಸದರಿ ಅಡ್ಡಲಾಗಿ ಕಟ್ಟಿದ ತಂತಿಯನ್ನು ನಾನು ದಾಟಿ ಹೋಗಿರುತ್ತೇನೆ ಎಂದರೆ ಸಾಕ್ಷಿ ಗೇಟಿನ ಬಳಿ ಹೋಗಿರುತ್ತೇನೆ ಎಂದು ಉತ್ತರಿಸುತ್ತಾರೆ ಹಾಗೂ ಗಲಾಟೆ ಆಗುತ್ತದೆ ಎಂದು ಸರ್ವೆ ಮಾಡಿಸುವಂತೆ ಹೇಳಿರುತ್ತೇನೆ. ಆ ದಿನ ಗಲಾಟೆ ಮಾಡುತ್ತಿದ್ದಾರೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಆದರೆ ಅವರಿಗೆ ಗಲಾಟೆ ಮಾಡಿಕೊಳ್ಳದಂತೆ ತಿಳುವಳಿಕೆ ನೀಡಿರುತ್ತೇನೆ. ನಾನು ಆ ದಿನ ತಿಳುವಳಿಕೆ ನೀಡಿದ ಸಂಬಂಧ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತೇನೆ. ಆ ದಿನ ನಾನು ಗೇಟನ್ನು ದಾಟಿ ಮುಂದೆ ಹೋಗಲು ಯಾವುದೇ ತೊಡಕು ಇರಲಿಲ್ಲ ಎಂದರೆ ಸಾಕ್ಷಿ ಅವರು ಖಾಸಗಿ ಜಮೀನು ಎಂದು ಹೇಳಿದ ಕಾರಣ ಹೋಗಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸದರಿ ಜಮೀನು ಖಾಸಗಿ ಜಮೀನು ಇರುತ್ತದೆ ಎಂಬ ಬಗ್ಗೆ ಮನವಿಯ ಮುಖಂತರ ನ್ಯಾಯಾಲಯಕ್ಕೆ ತಿಳಿಸಿರುತ್ತೇನೆ. ಸಾಕ್ಷಿ ಮುಂದುವರೆದು ಮಹಜರಿನಲ್ಲಿ ಖಾಸಗಿ ಜಮೀನು ಎಂದು ತಿಳಿಸಿದ್ದರು ಎ

8. ನಾನು ಸತೀಶ್ ಇವರ ವಿರುದ್ದ ನನ್ನ ಕರ್ತವ್ಯ ಅವಧಿಯಲ್ಲಿ ಎಷ್ಟು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನನಗೆ ದಾಖಲೆಯನ್ನು ನೋಡಿದರೆ ಅವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ ಬಗ್ಗೆ ಹೇಳಲು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಪ್ರಕರಣ ಸಂಖ್ಯೆ 8/2022 ರಲ್ಲಿ ಸಲ್ಲಿಸಿದ ದೋಷಾರೋಪಣ ಪತ್ರದ ದೃಢಿಕೃತ ಪ್ರತಿಯನ್ನು ತೋರಿಸಲಾಗಿ ಅದನ್ನು ನಿಪಿ- 22 ಎಂದು ಗುರುತಿಸಲಾಯಿತು. ಸದರಿ ನಿಪಿ- 22 ರಲ್ಲಿ ಶ್ರೀನಿವಾಸ ಇವರು ದೂರುದಾರರು ಇರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಪ್ರಕರಣ ಸಂಖ್ಯೆ 42/2021 ರಲ್ಲಿ ಸಲ್ಲಿಸಿದ ದೋಷಾರೋಪಣ ಪತ್ರದ ದೃಢಿಕೃತ ಪ್ರತಿಯನ್ನು ತೋರಿಸಲಾಗಿ ಅದನ್ನು ನಿಪಿ- 23 ಎಂದು ಗುರುತಿಸಲಾಯಿತು. ಸದರಿ ನಿಪಿ- 23 ರಲ್ಲಿ ಪ್ರಭಾ ಇವರು ದೂರುದಾರರು ಇರುತ್ತಾರೆ ಎಂದರೆ ಸರಿ. ನಿಪಿ- 23 ರಲ್ಲಿ ನನ್ನ ಭಾವಚಿತ್ರ ಗೇಟಿನ ಒಳಗಡೆ ತೆಗೆದ ಭಾವಚಿತ್ರ ಇರುತ್ತದೆ ಎಂದರೆ ಸಾಕ್ಷಿ ಅದನ್ನು ಪರಿಶೀಲನೆ ಮಾಡಿ ಹೇಳಬೇಕು ಎಂದು ಉತ್ತರಿಸುತ್ತಾರೆ. ನಿಪಿ- 23 ರಲ್ಲಿ ಮಹಜರನಲ್ಲಿ ಸತೀಶ್ ಇವರ ಜಮೀನಿನ ಪಕ್ಕದಲ್ಲಿ ಮಹಜರು ಮಾಡಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸತೀಶ್ ಇವರು ಜಯಮ್ಮ ಮತ್ತು ಶ್ರೀನಿವಾಸ ಇವರು

ರಸ್ತೆಯಲ್ಲಿ ತಮಗೆ ಓಡಾಡಲು ತೊಂದರೆ ಕೊಡುತ್ತಾರೆ ಎಂದು ಸಾಕಷ್ಟು ಬಾರಿ ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಬ್ಬರು ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ನನ್ನ ಕರ್ತವ್ಯ ಅವಧಿಯಲ್ಲಿ ಸತೀಶ್ ಇವರು ಕೊಟ್ಟ ದೂರಿಗೆ ಶ್ರೀನಿವಾಸ, ಪ್ರಭಾ ಮತ್ತು ಜಯಮ್ಮ ಇವರ ಮೇಲೆ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಸಾಕ್ಷಿ ಮುಂದುವರೆದು ಜಯಮ್ಮ ಇವರ ಮೇಲೆ ದಾಖಲೆ ನೋಡಿ ಹೇಳಬೇಕು ಎಂದು ಉತ್ತರಿಸುತ್ತಾರೆ. ನಾನು ಕರ್ತವ್ಯಕ್ಕೆ ಹರಿಹರಪುರ ಠಾಣೆಗೆ ಬಂದಾಗಿನಿಂದ ಅರ್ಜಿದಾರರ ಮೇಲೆ ನನಗೆ ವೈಶಮ್ಯ ಇತ್ತು ಎಂದರೆ ಸರಿಯಲ್ಲ. ನಾನು ರಾಜಕೀಯ ಒತ್ತಡದಿಂದ ಮತ್ತು ಸ್ವಾಇಚ್ಚೆಯಿಂದ ಜಯಮ್ಮ, ಪ್ರಭಾ ಮತ್ತು ಶ್ರೀನಿವಾಸರ ಪರ ಇದ್ದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯ ಅದೇಶ ಇದ್ದರು ಅವರ ಮೇಲಿನ ವೈಶಮ್ಯದಿಂದ ಗೇಟಿನ ನಂತರ ಅವರ ಜಮೀನಿನ ಒಳಗೆ ರಕ್ಷಣೆ ಕೊಡಲು ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಗೇಟಿನ ನಂತರ ಅರ್ಜಿದಾರರನ್ನು ತಮ್ಮ ಜಮೀನಿನ ಒಳಗಡೆ ಕರೆದುಕೊಂಡು ಹೋಗಲು ಅವಕಾಶ ನೀಡಿರುವುದಿಲ್ಲ ಎಂದರೆ ಸಾಕ್ಷಿ ಗೇಟಿನ ನಂತರ ಯಾವ ರಸ್ತೆ ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದು ಅರ್ಜಿದಾರರ ವಿರುದ್ಧ ಪರಿಹಾರ ನೀಡಲು ಬಾಧ್ಯಸ್ಥರು ಇರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ